ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

18
ಇಲಾಖೆ / ವಿಷಯ : DEPARTMENT / SUBJECT: ಸಂಗೀತ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 5/4/21

# ಖ್ಯಾತ ಸಿತಾರ್ ಕಲಾವಿದ ಪಂ.ತರ್ಲಗಟ್ಟಿ ನಿಧನ

ಕ-ಪ್ರ 5/4/21

ಧಾರವಾಡ: ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಕಲಾಶ್ರೀ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಖ್ಯಾತ ಸಿತಾರ್ ವಾದಕ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮತ್ತು ಲಲಿತಕಲಾ ಮಹಾ ವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪಂಡಿತ್ ಶಿವಾನಂದ ತರ್ಲಗಟ್ಟಿ (94) ಭಾನುವಾರ ನಿಧನರಾದರು.



ಹುಬ್ಬಳ್ಳಿ ತಾಲೂಕಿನ ಅದರಗುಂಚಿ ಗ್ರಾಮದಲ್ಲಿ 1927ರಲ್ಲಿ
ಜನಿಸಿದ್ದ ತರ್ಲಗಟ್ಟಿ ಆರ್.ವಿ.ಗುಡಿಯಾಳ್ ಮತ್ತು
ಮುಂಬೈನ ಉಸ್ತಾದ್ ಝಿಯಾ ಮೊಹಿಯುದ್ದೀನ್
ಡಾಗರ್ ಬಳಿ ತರಬೇತಿ ಪಡೆದರು. ಪಂಡಿತ್
ಮಲ್ಲಿಕಾರ್ಜುನ ಮನ್ಸೂರ್ ಅವರಿಂದ ರಾಗ-ರಾಗಿಣಿ
ಕಲಿತು ಸಿತಾರ್ ವಾದನದಲ್ಲಿ ಜೈಪುರ್ ಅತ್ರೋಳಿ ಘರಾಣಾ
ಬೆಳೆಸುವ ಪ್ರೇರಣೆ ಪಡೆದರು. ಮೃತರಿಗೆ ಪುತ್ರ ಕರ್ನಾಟಕ
ಸಂಗೀತ ಕಾಲೇಜಿನ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ
ತರ್ಲಗಟ್ಟಿ ಹಾಗೂ ನಾಲ್ವರು ಪುತ್ರಿಯರು ಇದ್ದಾರೆ.